**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ವಾರ್ಡ್ ಸಂಖ್ಯೆ:70, ರಾಜಗೋಪಾಲನಗರಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರ ಕಛೇರಿಯ ಸಭಾಂಗಣದಲ್ಲಿ ದಿನಾಂಕ:25/05/2019ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಕೆಗಳು**

1 ಶ್ರೀಮತಿ ಪದ್ಮಾವತಿ ನರಸಿಂಹಮೂರ್ತಿ(ಬಿ.ಬಿ.ಎಂ.ಪಿ ಸದಸ್ಯರು, ವಾರ್ಡ್ 70 ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ).
2. ಶ್ರೀ ನಾಗರಾಜು, ಸದಸ್ಯರು.
3. ಶ್ರೀ ಎನ್ ರಾಮಕೃಷ್ಣ, ಸದಸ್ಯರು.
4. ಶ್ರೀಮತಿ ಕಮಲಾಕ್ಷಿ, ಸದಸ್ಯರು.
5. ಶ್ರೀಮತಿ ಉಮಾ, ಸದಸ್ಯರು.
6. ಶ್ರೀಮತಿ ಶಿಲ್ಪ, ಸದಸ್ಯರು.
7. ಶ್ರೀಮತಿ ಲಕ್ಷ್ಮಮ್ಮ, ಸದಸ್ಯರು.
8. ಶ್ರೀ ತಿಮ್ಮೇಗೌಡ, ಸದಸ್ಯರು.
9. ಶ್ರೀ ಶಿವಶಂಕರ್.ಬಿ ಸದಸ್ಯರು.
10. ಶ್ರೀ ಮಹೇಶ್ ಪಿ.ಎನ್, ಸದಸ್ಯರು.
11. ಶ್ರೀ ಬಸವರಾಜು, ಸದಸ್ಯರು.

ಈ ಸಭೆಗೆ ಹಾಜರಾಗಿರುವ ಸಮಿತಿಯ ಅಧ್ಯಕ್ಷರು ರವರಿಗೆ ಮತ್ತು ಸದಸ್ಯರು ರವರುಗಳಿಗೆ ಹಾಗೂ ಅಧಿಕಾರಿ/ಸಿಬ್ಬಂದಿ ರವರುಗಳಿಗೆ ಕಾರ್ಯದರ್ಶಿಗಳು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಅಧ್ಯಕ್ಷರಾದ ಶ್ರೀಮತಿ ಪದ್ಮಾವತಿ ನರಸಿಂಹಮೂರ್ತಿ ರವರು ಮಾತನಾಡುತ್ತಾ, ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರಿಗಳೊಂದಿಗೆ ವಾರ್ಡಿಗೆ ಸಂಬಂಧಿಸಿದ ಸಮಸ್ಯೆಗಳು, ಅಭಿವೃದ್ಧಿ ಕೆಲಸಗಳು ಹಾಗೂ ವಾರ್ಡಿನ ಇತರೆ ಕುಂದುಕೊರತೆಗಳ ಬಗ್ಗೆ ಚರ್ಚಿಸಿದರು.

1. **ಶ್ರೀ ತಿಮ್ಮೇಗೌಡ ವಾರ್ಡ್ ಸಮಿತಿ ಸದಸ್ಯರು:** ವಾರ್ಡ್ ವ್ಯಾಪ್ತಿಯ ಶ್ರೀಗಂಧನಗರ, ಮುನೇಶ್ವರ ಬಡಾವಣೆ, ನಾರಾಯಣಗೌಡ ರಸ್ತೆಯಲ್ಲಿ BWSSB ಇಲಾಖೆಯವರು ಹೊಸದಾಗಿ ಒಳಚರಂಡಿ ಪೈಪ್ ಅಳವಡಿಸಿರುತ್ತಾರೆ. ಅದನ್ನು ಅತಿ ಜರೂರಾಗಿ ಕೆಲಸವನ್ನು ಪೂರ್ಣಗೊಳಿಸಲು ಸಂಬಂಧಪಟ್ಟ ಇಲಾಖೆಗೆ ಸೂಚಿಸಲು ತಿಳಿಸಿರುತ್ತಾರೆ.
2. **ಶ್ರೀಮತಿ ಕಮಲಾಕ್ಷಿ ವಾರ್ಡ್ ಸಮಿತಿ ಸದಸ್ಯರು:** ವಾರ್ಡಿನ ವ್ಯಾಪ್ತಿಯ ಕಪಿಲಾನಗರದಲ್ಲಿ ರಸ್ತೆ ಪಕ್ಕದ ಮೋರಿ ಮಣ್ಣನ್ನು ತೆಗೆದು ಪಕ್ಕದಲ್ಲಿ ಹಾಕಿರುತ್ತಾರೆ. ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತದೆ ಕೂಡಲೇ ಮಣ್ಣನ್ನು ತೆಗೆಸುವಂತೆ ತಿಳಿಸಿರುತ್ತಾರೆ. ಅಧ್ಯಕ್ಷರು ಮಾತನಾಡಿ ವಾರ್ಡ್ ಇಂಜಿನಿಯರ್ ರವರಿಗೆ ಕೂಡಲೇ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ತಿಳಿಸಲಾಯಿತು.

Scanned with CamScanner

3. **ಶ್ರೀ ನಾಗರಾಜು ವಾರ್ಡ್ ಸಮಿತಿ ಸದಸ್ಯರು:** ವಾರ್ಡ್ ವ್ಯಾಪ್ತಿಯಲ್ಲಿರುವ ಕೋಳಿ ಅಂಗಡಿ ಮಾಲೀಕರು ಕೋಳಿ ಕಸವನ್ನು ಎಲ್ಲಂದರಲ್ಲಿ ಖಾಲಿ ನಿವೇಶನಗಳಲ್ಲಿ ರಾತ್ರಿ ಸಮಯದಲ್ಲಿ ಎಸೆದು ಹೋಗುತ್ತಾರೆ ಇದರಿಂದ ಬೀದಿ ನಾಯಿಗಳು ಹೆಚ್ಚಾಗಿ ಸಾರ್ವಜನಿಕರು ಆ ಜಾಗದಲ್ಲಿ ನಡೆದು ಹೋಗುವಾಗ ಹಾಗೂ ವಾಹನದಲ್ಲಿ ಹೋಗುವವರ ಮೇಲೆ ದಾಳಿ ಮಾಡುತ್ತಿರುತ್ತವೆ, ಇದಕ್ಕೆ ಸೂಕ್ತ ಕ್ರಮ ಜರುಗಿಸಲು ತಿಳಿಸಿರುತ್ತಾರೆ. ಈ ಸಂಬಂಧ ಹಿರಿಯ ಆರೋಗ್ಯ ಪರಿವೀಕ್ಷಕರು ಕೂಡಲೇ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ಅಂತಿಮವಾಗಿ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದ ಮಾನ್ಯ ಅಧ್ಯಕ್ಷರು, ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಸಮಿತಿಯ ಕಾರ್ಯದರ್ಶಿರವರ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀಮತಿ ಪಿ.ಕೆ.

ಅಧ್ಯಕ್ಷರ ಸಹಿ

(ಶ್ರೀಮತಿ ಪದ್ಮಾವತಿ ನರಸಿಂಹಮೂರ್ತಿ),
ಬಿ.ಬಿ.ಎಂ.ಪಿ, ಸದಸ್ಯರು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ನಂ.70, ರಾಜಗೋಪಾಲನಗರ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು,

1. ಮಾನ್ಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಸಹಾಯಕ ಕಾರ್ಯಪಾಲಕ ಆಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ ದಾಸರಹಳ್ಳಿ ವಲಯ ರವರಿಗೆ
3. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಗ್ಗನಹಳ್ಳಿ ಉಪವಿಭಾಗ ರವರಿಗೆ.
4. ಸಹಾಯಕ ಅಭಿಯಂತರರು(ವಾರ್ಡ್ ನಂ–70) ರವರಿಗೆ.
5. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ–70 ರವರಿಗೆ.
6. ಎಲ್ಲಾ ವಾರ್ಡ್ ಸಮಿತಿ ಸದಸ್ಯರಿಗೆ.
7. ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣಧಿಕಾರಿಗಳು), ವಲಯ ಕೇಂದ್ರ, ದಾಸರಹಳ್ಳಿ ರವರಿಗೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, BWSSB ರವರಿಗೆ,
9. ಸಹಾಯಕ ಕಾರ್ಯಪಾಲಕ ಅಭಿಯಂತರರು, BESCOM ರವರಿಗೆ,
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿದೀಪಗಳ ನಿರ್ವಹಣೆ ವಿಭಾಗ, ದಾಸರಹಳ್ಳಿ ವಲಯ ರವರಿಗೆ,
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಉದ್ಯಾನವನ ನಿರ್ವಹಣೆ ವಿಭಾಗ, ದಾಸರಹಳ್ಳಿ ವಲಯ ರವರಿಗೆ,
12. ಪಶುಸಂಗೋಪನ ಇಲಾಖೆ ವಲಯ ಕೇಂದ್ರ, ದಾಸರಹಳ್ಳಿ ರವರಿಗೆ.
13. ಕಛೇರಿ ಕಡತಕ್ಕೆ.

Scanned with CamScanner